ಆ. ಸಿ.ಓ.ಡಿ. ತನಿಖೆಯು ಯಾವಾಗ ಮುಗಿಯುವುದು;

ಇ. ತಪ್ಪಿತಸ್ಥರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗುವುದು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಉ. – ಹೌದು –.

ತನಿಖಾಧಿಕಾರಿಯವರು ಸ್ಥಳವನ್ನು ಪರಿಶೀಲಿಸಿ ಸಂಬಂಧಪಟ್ಟ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ಮತ್ತು ಮೊಕದ್ದಮೆಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಪಡೆದುಕೊಳ್ಳುತ್ತಿದ್ದಾರೆ. ತನಿಖೆಯು ಭರದಿಂದ ನಡೆದಿದೆ.

ಆ. ತನಿಖೆಯು ಭರದಿಂದ ನಡೆದಿದ್ದು ಇಷ್ಟರಲ್ಲೇ ಒಂದು ಹಂತಕ್ಕೆ ತುಲುಪುವ ನಿರೀಕ್ಷೆ ಇದೆ.

ಇ. ತನಿಖೆಯಲ್ಲಿ ಸಂಗ್ರಹಿಸಿರುವ ಸಾಕ್ಷ್ಯಾಧಾರಗಳನ್ನು ವಿಮರ್ಶಿಸಿ ನ್ಯಾಯ ಸಮ್ಮತವಾದ ಕ್ರಮವನ್ನು ಸಿ.ಓ.ಡಿ. ವರದಿಯು ಸರ್ಕಾರಕ್ಕೆ ಬಂದ ಮೇಲೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿ ಆರಾಧನಾ ಯೋಜನೆಗಾಗಿ ಬಿಡುಗಡೆಯಾದ ಹಣ.

1068 (1096): ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ):–

ಮ್ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೇ ?

ಅ. ಆರಾಧನಾ ಯೋಜನೆ ಪ್ರಾರಂಭಿಸಲಾದದ್ದು ಯಾವಾಗ ? ಅಂದಿನಿಂದ ಇದುವರೆಗೂ ಬಿಡುಗಡೆ ಮಾಡಿರುವ ಹಣದ ಮೊತ್ತ ಎಷ್ಟು; (ವರ್ಷವಾರು ಬಿಡುಗಡೆ ಮಾಡಲಾದ ಮೊತ್ತವನ್ನು ಜಿಲ್ಲಾವಾರು ಕೊಡುವುದು);

ಆ. ಈ ಯೋಜನೆಯಿಂದ ರಾಜ್ಯದ್ಯಾಂತ ಪ್ರಯೋಜನವಾಗಲಿರುವ ಗ್ರಾಮಗಳೆಷ್ಟು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಉ. 1991-92ನೇ ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ. ಕಂಇ 104 ಮುಭೂಆ 91, ದಿನಾಂಕ 10.7.1991ರಲ್ಲಿ ಆರಾಧನಾ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಇದುವರೆವಿಗೂ ಒಟ್ಟು ರೂ. 7.24 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. 1991-92 ರಲ್ಲಿ ರೂ. 5.00 ಕೋಟಿಗಳು, 1992-93ರಲ್ಲಿ ರೂ. 2.24 ಕೋಟಿಗಳು. ವಿವರಗಳನ್ನು ಅನುಬಂಧ 'ಅ'ನಲ್ಲಿ ಒದಗಿಸಲಾಗಿದೆ.

ಆ. ಪ್ರಶ್ನೆ ಉದ್ಭವಿಸುವುದಿಲ್ಲ. ಈ ಯೋಜನೆಯು ಕೇವಲ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ : ಹಿಂದುಳಿದ ಜನಾಂಗಗಳಿಗೆ ಸೀಮಿತವಾಗಿದ್ದು, ಅವರುಗಳು ವಾಸಿಸುವ ಕೇರಿ, ಕೊಪ್ಪಲು ಮತ್ತು ಇತರೆ ಸ್ಥಳಗಳಲ್ಲಿ ಪೂಜಾಸ್ಥಾನ:ಆರಾಧನಾ ಮಂದಿರ:ಭಜನಾ ಮಂದಿರ:ಪ್ರಾರ್ಥನಾ ಮಂದಿರ ಇದರ ನಿರ್ಮಾಣ:ಜೀರ್ಣೋದ್ಧಾರ ದುರಸ್ತಿ ಇವುಗಳಿಗೆ ಸರ್ಕಾರದಿಂದ ಧನ ಸಹಾಯ ನೀಡುವುದರಿಂದ ಗ್ರಾಮವಾರು ಪ್ರಯೋಜನ ಲಭ್ಯದ ಪ್ರಶ್ನೆ ಉದ್ಭವಿಸುವುದಿಲ್ಲ. ಜಿಲ್ಲಾವಾರು ಕೈಗೊಂಡಿರುವ ಕಾಮಗಾರಿಗಳನ್ನು ಅನುಬಂಧ 'ಅ'ನಲ್ಲಿ ತೋರಿಸಿದೆ.

ಆರಾಧನಾ ಯೋಜನೆಯಲ್ಲಿ ಹಣ ಮಂಜೂರು ಮಾಡಿದ ಮತ್ತು ಖರ್ಚಾದ ವಿವರದ ತಃಖ್ತೆ

ಕ್ರ. ಸಂ.	ಜಿಲ್ಲೆ	1991–92ರಲ್ಲಿ ಮಂಜೂರು ಮಾಡಿದ ಮೊತ್ತ	1992–93ರಲ್ಲಿ ಮಂಜೂರು ಮಾಡಿದ ಮೊತ್ತ	ಈವರೆವಿಗೂ ಖರ್ಚಾದ ಮೊತ್ತ	ಜಿಲ್ಲಾ ಸಮಿತಿ ಮಂಜೂರು ಮಾಡಿದ ಕಾಮಗಾರಿಗಳ ಸಂಖ್ಯೆ	ನವ ನಿರ್ಮಾಣ		ದುರಸ್ತಿ ಜೀರ್ಣೋದ್ಧಾರ	
						ಪೂರ್ಣ ಸ್ಥಳ ಕಟ್ಟಿರುವುದು	ಪ್ರಗತಿಯಲ್ಲಿರುವುದು	ದುರಸ್ತಿಯಾಗಿರುವುದು	ಪ್ರಗತಿ
1	2	3	4	5	6	7	8	9	10
		ರೂ.	ರೂ.	ರೂ.					
1.	ಬೆಂಗಳೂರು (ನಗರ)	28,39,275–00	15,00,000–00	3,19,400–00	175	–	–	–	175
2.	ಬೆಂಗಳೂರು (ಗ್ರಾ)	18,92,850–00	10,00,000–00	3,46,807–00	137	15	83	22	17
3.	ಬೆಳಗಾಂ	40,94,130–00	18,00,000–00	14,77,105–00	137	3	19	17	98
4.	ಬಳ್ಳಾರಿ	20,47,565–00	9,00,000–00	5,12,760–00	159	10	149	–	–
5.	ಬೀದರ್	13,65,710–00	6,00,000–00	6,82,855–00	30	–	2	–	28
6.	ಬಿಜಾಪುರ	34,12,275–00	15,00,000–00	27,05,905–00	147	14	17	42	74
7.	ಚಿಕ್ಕಮಗಳೂರು	13,64,710–00	6,00,000–00	6,82,100–00	215	–	–	–	215
8.	ಚಿತ್ರದುರ್ಗ	25,02,135–00	11,00,000–00	6,82,912–00	123	–	32	14	77
9.	ದಕ್ಷಿಣ ಕನ್ನಡ	34,12,275–00	15,00,000–00	20,44,800–00	162	–	8	11	143
10.	ಧಾರವಾಡ	40,94,130–00	18,00,000–00	30,41,136–00	283	1	5	151	126
11.	ಗುಲ್ಬರ್ಗಾ	29,56,705–00	13,00,000–00	3,22,000–00	175	–	65	–	110
12.	ಹಾಸನ	18,20,280–00	8,00,000–00	2,94,950–00	93	–	27	–	66
13.	ಕೊಡಗು	6,82,855–00	3,00,000–00	1,57,223–00	22	–	–	9	13
14.	ಕೋಲಾರ	27,29,420–00	12,00,000–00	20,98,800–00	130	–	45	–	85

1	2	3	4	5	6	7	8	9	10
15.	ಮಂಡ್ಯ	20,47,565-00	9,00,000-00	9,70,212-00	112	–	–	58	54
16.	ಮೈಸೂರು	36,39,560-00	16,00,000-00	7,75,550-00	93	11	56	–	26
17.	ರಾಯಚೂರು	25,02,295-00	11,00,000-00	1,81,364-00	287	–	9	19	259
18.	ಶಿವಮೊಗ್ಗ	22,74,850-00	10,00,000-00	2,44,867-00	185	–	–	12	173
19.	ತುಮಕೂರು	29,56,705-00	13,00,000-00	69,340-00	118	–	–	–	118
20.	ಉತ್ತರ ಕನ್ನಡ	13,64,710-00	6,00,000-00	11,24,678-00	34	4	15	2	13
	ಒಟ್ಟು	5,00,00,000.00	2,24,00,000-00	1,87,34,705-00	2817	58	532	357	1870

ಸಂ: ಕಂಇ 85 ಮುಬೂಆ 92.